ಕರ್ನಾಟಕ ಸರ್ಕಾರ (ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,
ಹಾಸನ

ಸ್ಪೆಷಲ್ ಕೇಸ್.ನಂಃ 140/2015

ಚಾಸಾ-4 ಪ್ರಾಸಾ -2 ದಿನಾಂಕ 22.08.2019

ಪ್ರಮಾಣವಚನ ಬೋದಿಸಲಾಯಿತು.

| | | |
|---|---|---|
| ಹೆಸರು | : | ವೈ. ಎಸ್ ಸತ್ಯನಾರಾಯಣರಾವ್ |
| ತಂದೆಯ/ಗಂಡನ ಹೆಸರು | : | ಲೇಟ್ ಸೀತರಾಮಯ್ಯ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ದ್ವಿದಸ. ವಿಶೇಷ<br>ಲೋಕೋಪಯೋಗಿ ಇಲಾಖೆ, ಹಾಸನ |
| ವಾಸ | : | ಹಾಸನ |

ಮುಖ್ಯ ವಿಚಾರಣೆಃ ಸರ್ಕಾರದ ಪರ ಸ್ಪೆಷಲ್ ಪಿಪಿ ರವರಿಂದಃ

ನಾನು ಹಾಸನದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ದ್ವಿದ.ಸ ನಾಗಿ ಕೆಲಸ ಮಾಡುತ್ತಿದ್ದೆನು. ನಾನು ದಿನಾಂಕ 31.05.2016 ರಂದು ನಿವೃತ್ತಿಯಾದೆನು. ಅದಕ್ಕೂ ಮೊದಲು ನಾಲ್ಕೈದು ವರ್ಷದಿಂದ ಅಲ್ಲಿ ಕೆಲಸ ಮಾಡುತ್ತಿದ್ದೆನು.

2. ದಿನಾಂಕ 25.07.2013 ರಂದು ನಮ್ಮ ಕಚೇರಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಆದೇಶದ ಮೇರೆಗೆ ಅದೇ ದಿನ ಸಂಜೆ 5.00 ಗಂಟೆಗೆ ಹಾಸನದ ಲೋಕಾಯುಕ್ತ ಕಚೇರಿಯಲ್ಲಿ ಪೊಲೀಸ್ ಅಧೀಕ್ಷಕರಾದ ಶಿವಬಸಪ್ಪರವರ ಮುಂದೆ ಹಾಜರಾದೆನು. ನನ್ನ ಜೊತೆಯಲ್ಲಿ ನಮ್ಮ ಕಚೇರಿಯ ಶಿವಪ್ರಕಾಶ್, ದ್ವಿದಸ ರವರು ಸಹ ಲೋಕಾಯುಕ್ತ ಕಚೇರಿಗೆ ಬಂದಿದ್ದರು. ಸದರಿ ಪೊಲೀಸ್ ಅಧೀಕ್ಷಕರು ನಮ್ಮನ್ನು ದಿನಾಂಕ 26.07.2013 ರ ಬೆಳಿಗ್ಗೆ ಬರುವಂತೆ ತಿಳಿಸಿದರು.

3. ಅದರಂತೆ ನಾವು ದಿನಾಂಕ 26.07.2013 ರಂದು ಬೆಳಿಗ್ಗೆ 5.30 ಗಂಟೆಗೆ ಹಾಸನದ ಲೋಕಾಯುಕ್ತ ಕಚೇರಿಗೆ ಹೋದೆವು. ಸದರಿ ಕಚೇರಿಯಲ್ಲಿದ್ದ ಇನ್ಸಪೆಕ್ಟರ್ ವಿನಯ್ ರವರು ನಮ್ಮನ್ನು ಅವರ ಸಿಬ್ಬಂದಿಗೆ ಪರಿಚಯಿಸಿದೆವು. ಪಂಚನಾಮೆ ಸಮಯದಲ್ಲಿ ನಾವು ಪಂಚರಾಗಿರಬೇಕೆಂದು ಹೇಳಿ ನಮ್ಮನ್ನು ಹಾಸನದ ಕೆಎಸ್ಆರ್.ಟಿ.ಸಿ ಬಸ್ಸು ನಿಲ್ದಾಣದ ಮುಂಭಾಗದಲ್ಲಿರುವ ಹೌಸಿಂಗ್ ಬೋರ್ಡ್ ಗೆ ಕರೆದುಕೊಂಡು ಹೋದರು. ಅಲ್ಲಿ ಇರುವ ಮನೆ ಸಂಖ್ಯೆ ಎಂ.ಐ.ಜಿ-1442 ಕ್ಕೆ ಹೋದೆವು. ಅಲ್ಲಿ ಮಂಜುನಾಥರವರ ಮಗ ಸುದರ್ಶನ್ ಇದ್ದನು. ಅವರಿಗೆ ಲೋಕಾಯುಕ್ತ ಪಿಐ ರವರು ನಾವು ಅವರ ಮನೆಗೆ ಭೇಟಿ ಕೊಟ್ಟ ವಿಚಾರವನ್ನು ತಿಳಿಸಿದರು ಮತ್ತು ಸರ್ಚ್ ವಾರೆಂಟನ್ನು ತೋರಿಸಿದರು. ಸದರಿ ಸರ್ಚ್ ವಾರೆಂಟ್ ಮಂಜುನಾಥರವರ ಹೆಸರಿನಲ್ಲಿತ್ತು. ನಾವು ಅವರ ಮನೆಗೆ ಹೋದಾಗ ಮಂಜುನಾಥ್

ಇರಲಿಲ್ಲ. ಸದರಿ ವಾರೆಂಟನ್ನು ಅವರ ಮಗ ಸುದರ್ಶನ್ ನಿಗೆ ಜಾರಿ ಮಾಡಿದೆವು. ಆ ನಂತರ ಸದರಿ ಮನೆಯೊಳಗೆ ಹೋದೆವು.

4. ಸದರಿ ಮನೆಯ ಮುಂಭಾಗದಲ್ಲಿ ವಿವಿಧ ಅಳತೆಗಳುಳ್ಳ ಕೆಂಪು ಗ್ರಾನೈಟ್ ಸ್ಲಾಬ್ ಗಳು ಇದ್ದವು. ಅವುಗಳ ಒಟ್ಟು ಅಂದಾಜು ಬೆಲೆ ರೂ.20,000/- ಎಂದು ಅಭಿಪ್ರಾಯಪಟ್ಟೆವು. ಆ ನಂತರ ಮೊದಲನೇ ಅಂತಸ್ತಿನ ಮಹಡಿಗೆ ಹೋದೆವು. ಸದರಿ ಮನೆಗೆ ಉಪಯೋಗಿಸಲು ತಂದಿದ್ದಂತಹ ಮರಗಳನ್ನು ನೋಡಿ ಅವುಗಳ ಒಟ್ಟು ಅಂದಾಜು ಬೆಲೆ ರೂ.1,50,000/- ಎಂದು ಅಭಿಪ್ರಾಯಪಟ್ಟೆವು. ಆ ನಂತರ 2 ಮತ್ತು 3 ನೇ ಅಂತಸ್ತಿಗೆ ಹೋಗಿ ನೋಡಲಾಗಿ ಸದರಿ ಮನೆಗಳ ನೆಲಕ್ಕೆ ಕೆಂಪು ಗ್ರಾನೈಟ್ ಹಾಕಿದ್ದರು, ಇನ್ನೂ ಕಿಟಕಿ, ಬಾಗಿಲುಗಳನ್ನು ಅಳವಡಿಸಿರಲಿಲ್ಲ.

5. ಆ ದಿನ ಆರೋಪಿಯ ಮನೆಯಲ್ಲಿ ಲೋಕಾಯುಕ್ತ ಪೊಲೀಸರು ಯಾವುದೇ ದಾಖಲೆಗಳನ್ನು ಅಮಾನತುಪಡಿಸಿಕೊಳ್ಳಲಿಲ್ಲ. ಸದರಿ ಪೊಲೀಸರು ಸದರಿ ಮನೆಯಲ್ಲಿಯೇ ಮಹಜರ್ ಮಾಡಿದರು. ಸದರಿ ಮಹಜರಿಗೆ ನಾನು ಸಹಿ ಮಾಡಿದೆನು. ಮಹಜರಿನಲ್ಲಿರುವ ಸಹಿ ನೋಡಿದೆ. ಅದು ನನ್ನ ಸಹಿ. ದಿನಾಂಕ 26.07.2013 ರ ಶೋಧನಾ ಪಂಚನಾಮೆಯನ್ನು ನಿಪಿ-63 ಎಂದು ಸಾಕ್ಷಿ ಸಹಿಯನ್ನು ನಿಪಿ-63(ಎ) ಎಂದು ಗುರುತಿಸಲಾಯಿತು. ಈಗ ಸರ್ಚ್ ವಾರೆಂಟನ್ನು ನೋಡಿದೆನು. ಅದರಲ್ಲಿರುವ ಸಹಿ ನೋಡಿದೆ. ಅದು ನನ್ನ ಸಹಿ. ಸರ್ಚ್ ವಾರೆಂಟನ್ನು ನಿಪಿ-64 ಎಂದು ಸಾಕ್ಷಿ ಸಹಿಯನ್ನು ನಿಪಿ-64(ಎ)ಎಂದು ಗುರುತಿಸಲಾಯಿತು. ಸದರಿ ಮಹಜರ್ ಆದ ನಂತರ ನಾವು ಲೋಕಾಯುಕ್ತ ಕಚೇರಿಗೆ ಹಿಂತಿರುಗಿ ಬಂದೆವು. ನಂತರ ನಮ್ಮನ್ನು ಲೋಕಾಯುಕ್ತ ಕಚೇರಿಯ ಕರ್ತವ್ಯದಿಂದ ಬಿಡುಗಡೆಗೊಳಿಸಿದರು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿದ್ದಾರೆ.

ಪಾಟೀಸವಾಲುಃ ಆರೋಪಿಪರ ಶ್ರೀ ಸಿ.ಎನ್.ವಿ ರವರಿಂದಃಃ

6. ಲೋಕಾಯುಕ್ತ ತನಿಖೆ ಪ್ರಕ್ರಿಯೆ ಬಗ್ಗೆ ಮೊದಲು ನನಗೆ ಗೊತ್ತಿರಲಿಲ್ಲ . ನಾವು ಲೋಕಾಯುಕ್ತ ಕಚೇರಿಗೆ ಹೋಗಲು ನಮ್ಮ ಸಹಾಯಕ ಕಾರ್ಯಪಾಲಕ ಅಭಿಯಂತರರು ನಮಗೆ ಮೌಖಿಕವಾಗಿ ತಿಳಿಸಿದರು. ನಾವು ಲೋಕಾಯುಕ್ತ ಕಚೇರಿಗೆ ಹೋದಾಗ ಬೇರೆ ಖಾಸಗಿ ವ್ಯಕ್ತಿಗಳು ಇರಲಿಲ್ಲ. ನಾವು ಲೋಕಾಯುಕ್ತ ಕಚೇರಿಯಿಂದ ಹಾಸನದ ಚನ್ನಪಟ್ಟದಲ್ಲಿರುವ ಹೌಸಿಂಗ್ ಬೋರ್ಡ್ ಗೆ ಹೋಗುವ ಸಮಯದಲ್ಲಿ ಲೋಕಾಯುಕ್ತ ಕಚೇರಿಯ ಆವರಣದಲ್ಲಿ ಖಾಸಗಿ ವ್ಯಕ್ತಿಗಳು ಇರಲಿಲ್ಲ. ಆ ದಿನ ನನಗೆ ಸರ್ಚ್ ವಾರೆಂಟ್ ಬಗ್ಗೆ ಗೊತ್ತಿರಲಿಲ್ಲ. ಆರೋಪಿಯ ಮನೆಯೊಳಗೆ ಹೋದಾಗ ಲೋಕಾಯುಕ್ತ ಪೊಲೀಸರು ನನಗೆ ಸರ್ಚ್ ವಾರೆಂಟ್ ತೋರಿಸಿ ಅದಕ್ಕೆ ನನ್ನ ಸಹಿ ಪಡೆದರು. ನಾವು ಆ ಮನೆಗೆ ಹೋದಾಗ ಆ ಮನೆಗೆ ಕಿಟಕಿ, ಬಾಗಿಲುಗಳನ್ನು ಅಳವಡಿಸಿರಲಿಲ್ಲ. ನಾವು ಆ ಮನೆಗೆ ಹೋದಾಗ ಅಲ್ಲಿ ಮನೆಕಟ್ಟುವ ಕೂಲಿಕಾರ್ಮಿಕರು ಇರಲಿಲ್ಲ. ನಾವು ಹೋದಾಗ ಆ ಮನೆಯಲ್ಲಿದ್ದವನು ಆರೋಪಿಯ ಮಗ ಎಂದು ನನಗೆ ಗೊತ್ತಿರಲಿಲ್ಲ.

7. ಗ್ರಾನೈಟ್‌ನಲ್ಲಿ ವಿವಿಧ ಬಗೆಯ ಗ್ರಾನೈಟ್ ಇವೆ. ಅವುಗಳ ಬೆಲೆಯೂ ಸಹ ವ್ಯತ್ಯಾಸವಿರುತ್ತದೆ. ಗ್ರಾನೈಟ್ ಗಳ ಬೆಲೆಗಳನ್ನು ನಾನು ಹೇಳಲಾಗುವುದಿಲ್ಲ. ಮರವನ್ನು ಬರೀಗಣ್ಣಿನಿಂದ ನೋಡಿ ಅದು ಯಾವ ಜಾತಿ ಮರ ಮತ್ತು ಅದರ ಬೆಲೆ ಎಷ್ಟು ಎಂದು ನಾನು ಹೇಳಲಾಗುವುದಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಮರದ ಬೆಲೆ 1,50,000/- ಹಾಗೂ ಗ್ರಾನೈಟ್ ಬೆಲೆ 20,000/- ಎಂದು ಹೇಳಿದ್ದೇನೆ, ಅದು ಲೋಕಾಯುಕ್ತ ಅಧಿಕಾರಿಗಳು ನಿಗದಿ ಮಾಡಿದ ಬೆಲೆ.

8. ಆ ಸಮಯದಲ್ಲಿ ಆರೋಪಿ ಮಂಜುನಾಥ ಮತ್ತು ಆತನ ಕುಟುಂಬಸ್ಥರು ಹಾಸನದ ಕೆ.ಆರ್ ಪುರಂನಲ್ಲಿ ವಾಸವಿದ್ದರು. ನಾವು ಆ ದಿನ ಭೇಟಿ ಕೊಟ್ಟಿದ್ದ ಮನೆಯಲ್ಲಿ ಸುಮಾರು ನಾಲ್ಕು ಗಂಟೆಗಳ ಕಾಲ ಇದ್ದೆವು. ಸದರಿ ನಾಲ್ಕು ಗಂಟೆಗಳ ಕಾಲ ಆದ ನಂತರ ನಿಪಿ-63 ಮತ್ತು ನಿಪಿ-64 ಕ್ಕೆ ಸಹಿ ಮಾಡಿದ್ದೇನೆ. ಆರೋಪಿಯ ಮಗನೂ ಸಹ ಸದರಿ ದಾಖಲೆಗಳಿಗೆ ನಾನು ಸಹಿ ಮಾಡಿದಾಗಲೇ ಮಾಡಿದ್ದಾನೆ.

9. ನಾವು ಆ ಮನೆಗೆ ಭೇಟಿ ಕೊಟ್ಟಾಗ ಅಲ್ಲಿ ಯಾರೂ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆ ಮನೆಗೆ ಹೋದ ನಂತರ ಲೋಕಾಯುಕ್ತ ಪೊಲೀಸರು ಆರೋಪಿ ಮಗ ಸುದರ್ಶನ್ ನನ್ನು ಕೆ.ಆರ್.ಪುರಂ ನಿಂದ ಬಲವಂತವಾಗಿ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಅಲ್ಲಿ ಸದರಿ ಸುದರ್ಶನ್ ಸದರಿ ಮನೆಯನ್ನು ನನ್ನ ತಂದೆ ಕಟ್ಟಿಸುತ್ತಿಲ್ಲ ಹಾಗೂ ಸದರಿ ಮನೆಯನ್ನು ತನ್ನ ತಾಯಿಯ ತಂಗಿ ಆಶಾರವರು ಕಟ್ಟಿಸುತ್ತಿದ್ದಾರೆ ಎಂದು ನನ್ನ ಸಮಕ್ಷಮ ಲೋಕಾಯುಕ್ತ ಪೊಲೀಸರಿಗೆ ಹೇಳಿದ ಎಂದರೆ ಸರಿಯಲ್ಲ.

10. ನಾವು ಭೇಟಿ ಕೊಟ್ಟ ಮನೆಯಲ್ಲಿ ನಿಪಿ-63 ಮತ್ತು 64 ಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳಿಗೆ ಲೋಕಾಯುಕ್ತ ಕಚೇರಿಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

*ಓ.ಹೇ.ಕೇ.ಸ.ಇದೆ.*

*ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ*
*ಸ್ಪೆಷಲ್ ನ್ಯಾಯಾಧೀಶರು, ಹಾಸನ.*